# 2 ನೇ ಹೆಚ್ಚುವರಿ ಪ್ರಥಮ ದರ್ಜೆಯ  ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು

**ಸಿ.ಸಿ  1275-2016                    ಸಿ. ಡಬ್ಲ್ಯು: 03**

**ಪಿ. ಡಬ್ಲ್ಯು: 01**

| | |
|---|---|
| ಸಾಕ್ಷಿದಾರರ ಹೆಸರು<br>ತಂದೆ/ಗಂಡನ  ಹೆಸರು<br>ವಯಸ್ಸು<br>ಕೆಲಸ<br>ವಾಸ | ಪ್ರಕಾಶ್<br>ಲೇ.  ಬಸವರಾಜಪ್ಪ<br>67 ವರ್ಷ<br>ವ್ಯವಸಾಯ<br>ಕೃಷ್ಣಾಪುರ ಗ್ರಾಮ. ನಂಜನಗೂಡು ತಾ. |
| | **ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕ 29-07-2025** |

**ಮುಖ್ಯ ವಿಚಾರಣೆ:  ಮಾನ್ಯ ಎಪಿಪಿ   ವಕೀಲರಿಂದ:**

ನನಗೆ ಚಾಸಾ-1 ಮತ್ತು 2 ರವರ ಪರಿಚಯ ಇರುತ್ತದೆ.  ಆರೋಪಿ ನನಗೆ ಗೊತ್ತಿಲ್ಲ. ಆರೋಪಿ ಯಾವ ರೀತಿ ವಾಹನವನ್ನು ಚಾಲನೆ ಮಾಡಿಕೊಂಡು ಬಂದು ಮೃತ ಮಹದೇವಸ್ವಾಮಿ  ಮತ್ತು ರಾಜುರವರಿಗೆ ಡಿಕ್ಕಿ ಪಡಿಸಿರುವುದು ಕಣ್ಣಾರೆ ಕಂಡಿರುವುದಿಲ್ಲ. ಈ ಪ್ರಕಣದ ಸಂಬಂದ ಪೋಲೀಸರಿಗೆ ಯಾವುದೇ ಹೇಳಿಕೆ ನೀಡಿರುವುದಿಲ್ಲ.

ಸಾಕ್ಷಿಗೆ ಒಂದು ದಾಖಲೆ ತೋರಿಸಿದ್ದು ಅದು ಸ್ಥಳ ಮಹಜರಾಗಿದ್ದು  ಆಗಿದ್ದು ಅದನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು  ನಿಪಿ-1 ಎಂದು, ಅದರ ಮೇಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ನಿಪಿ-1 ರಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ. ನಿಪಿ-1 ಕ್ಕೆ ಸುಮಾರು 9 ವರ್ಷಗಳ ಹಿಂದೆ ಪೊಲೀಸರ ಕೋರಿಕೆ ಮೇರೆಗೆ ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ. ಈ ಪ್ರಕಣದ ವಿಧ್ಯಾಮಾನ ಗೊತ್ತಿರುವುದಿಲ್ಲ.

(ಸಸಅ ಅವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿಸಲು ಅನುಮತಿಯನ್ನು ಕೋರಿದ್ದು ಅನುಮತಿಯನ್ನು ನೀಡಲಾಯಿತು)

<u>ಪಾಟೀ ಸವಾಲುಃ ಮಾನ್ಯ ಎಪಿಪಿ ಯವರಿಂದ</u>

ದಿಃ26-07-2016 ರಂದು ನನ್ನ ಸ್ವಂತ ಕೆಲಸದ ನಿಮಿತ್ತ ನಂಜನಗೂಡಿಗೆ ಬಂದಿದ್ದು ಕೆಲಸ ಮುಗಿಸಿಕೊಂಡು ವಾಪಸ್ಸು ನಮ್ಮ ಊರಿಗೆ ಹೋಗಲು ಹುಲ್ಲಹಳ್ಳಿ ಸರ್ಕಲ್ ಕಡೆಯಿಂದ ಚಿಂತಾಮಣಿ ಗಣಪತಿ ಸರ್ಕಲ್ ಗೆ ರಾತ್ರಿ 8 ಗಂಟೆ ಸಮಯದಲ್ಲಿ ನಂಜನಗೂಡಿನ ವಿಧ್ಯಾವರ್ದಕ ಪ್ರೌಢಶಾಲೆ ಮುಂಭಾಗ ಬರುತ್ತಿದ್ದೇನೆ ಎಂದರೆ ಸರಿಯಲ್ಲ. ಆಗ ಎದುರುಗಡೆಯಿಂದ ಚಿಂತಾಣೆ ಮಣಿ ಗಣಪತಿ ಸರ್ಕಲ್ ಕಡೆಯಿಂದ ಹುಲ್ಲಹಳ್ಳಿ ಸರ್ಕಲ್ ಕಡೆಗೆ ಇಬ್ಬರೂ ಆಸಾಮಿಗಳು ರಸ್ತೆಯ ಎಡಬದಿಯಲ್ಲಿ ನಡೆದುಕೊಂಡು ಹೋಗುತ್ತಿದ್ದರು ಎಂದರೆ ಸರಿಯಲ್ಲ. ಆಗ ಹಿಂಭಾಗದಿಂದ ಅಂದರೆ ಗುಂಡ್ಲುಪೇಟೆ ಕಡೆಯಿಂದ ಒಂದು ಕಾರಿನ ಚಾಲಕ ಕಾರನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಓಡಿಸಿಕೊಂಡು ಬಂದು ಒಬ್ಬರಿಗೆ ಡಿಕ್ಕಿ ಮಾಡಿದ ಕೂಡಲೇ ನಾನು ಹೋಗಿ ನೋಡಲಾಗಿ ಗಾಯಗೊಂಡು ವ್ಯಕ್ತಿಯ ಹೆಸರು ಹುಣಸನಾಳು ಗ್ರಾಮದ ಮಹದೇವಸ್ವಾಮಿ ಹಾಗೂ ಅವರ ಜೊತೆಯಲ್ಲಿ ಇದ್ದ ಚಾಸಾ-2 ರವರು ಎಂದು ತಿಳಿಯಿತು ಎಂದರೆ ಸರಿಯಲ್ಲ. ಆಗ ಮಹದೇವಸ್ವಾಮಿರವರಿಗೆ ತಲೆ , ಮೂಗು , ಮತ್ತು ಕಿವಿಗೆ ಏಟಾಗಿ ರಕ್ತ ಬರುತ್ತಿತ್ತು ಎಂದರೆ ಸರಿಯಲ್ಲ. ನಂತರ ನಾನು ಮತ್ತು ಚಾಸಾ-2 ರವರು ಮಹದೇವಸ್ವಾಮಿರವರನ್ನು ಸುಧಾರಿಸಿ ಕಾರ್ ನಂಬರ್ ನೋಡಲಾಗಿ ಕೆಎ-51-ಬಿ-0163 ಕಾರ್ ಅಗಿದ್ದು ಕಾರಿನ ಚಾಲಕನ ಹೆಸರು ಮಧುಸೂದನ್

ಬೆಂಗಳೂರು ಎಂದು ತಿಳಿಸಿದನು ಎಂದರೆ ಸರಿಯಲ್ಲ. ನಂತರ ಗಾಯಗೊಂಡ ಮದೇವಸ್ವಾಮಿರವರು ಅದೇ ಕಾರಿನಲ್ಲಿ ನಂಜನಗೂಡಿನ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸುತ್ತಿದ್ದಾಗ ಕಾರಿನ ಚಾಲಕ ಕಾರನ್ನು ತೆಗೆದುಕೊಂಡು ಹೊರಟು ಹೋದನು ಎಂದರೆ ಸರಿಯಲ್ಲ. ನಂತರ ಮಹದೇವಸ್ವಾಮಿ ಮತ್ತು ಚಾಸಾ-2 ರವರನ್ನು ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಕೆ ಆರ್ ಆಸ್ಪತ್ರೆಗೆ ಕರೆದುಕೊಂಡು ಹೋದರು ಎಂದರೆ ಸರಿಯಲ್ಲ. ಸದರಿ ವಿಚಾರವಾಗಿ ಚಾಸಾ-1 ರವರು ದೂರು ದಾಖಲಿಸಿದ ವಿಚಾರ ನನಗೆ ತಿಳಿಯಿತು ಎಂದರೆ ಸರಿಯಲ್ಲ. ಗಾಯಗೊಂಡು ಮಹದೇವಸ್ವಾಮಿರವರು ದಿಃ 02-08-2016 ರಂದು ಬೆಳಗಿನ ಜಾವ 1-40 ಗಂಟೆ ಸಮಯದಲ್ಲಿ ಚಿಕಿತ್ಸೆ ಫಲಕಾರಿಯಾಗದೇ ಮೈಸೂರಿನ ಕೆ ಆರ್ ಆಸ್ಪತ್ರೆಯಲ್ಲಿ ಸತ್ತು ಹೋದರು ಎಂದು ತಿಳಿಯಿತು ಎಂದರೆ ಸರಿಯಲ್ಲ. ಸದರಿ ಅಪಘಾತಕ್ಕೆ ಆರೋಪಿಯ ಅತಿವೇಗ ಹಾಗೂ ಅಜಾಗರೂಕತೆ ಕಾರಣವೆಂದು ಆರೋಪಿ ಮತ್ತು ಕಾರನ್ನು ನೋಡಿದರು ಗುರುತಿಸುತ್ತೇನೆ ಎಂದು ನನಗೆ ಈಗ ಓದಿ ಹೇಳಿದಂತೆ ನಿಪಿ-2 ರಂತೆ ದಿಃ 03-08-2016 ರಂದು ಪೋಲೀಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ.

ದಿಃ 28-07-2016 ರಂದು ಪೋಲೀಸರು ನಂಜನಗೂಡು ಪಟ್ಟಣ ವಿಧ್ಯಾವರ್ದಕ ಪ್ರೌಡಶಾಲೆಯ ಮುಂಭಾಗ ಬಂದಾಗ ನಾನು ಅವರಿಗೆ ಸ್ಥಳವನ್ನು ತೋರಿಸಿಕೊಟ್ಟ ಮೇರೆಗೆ ಸಂಜೆ 5-15 ಗಂಟೆಯಿಂದ 6-00 ಗಂಟೆಯವರಗೆ ನಿಪಿ-1 ರಂತೆ ಮಹಜರು ಕ್ರಮ ಜರುಗಿಸಿ ಸ್ಥಳದಲ್ಲಿ ನನ್ನ ಮತ್ತು ಚಾಸಾ-5 ಮತ್ತು 10 ರವರ ಸಹಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ.

ನಿಪಿ-1 ಮತ್ತು 2 ರಲ್ಲಿ ಬರೆದಿರುವ ವಿಚಾರ ಗೊತ್ತಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)

**ಓ . ಹೇ. ಕೇ. ಸರಿ. ಇದೆ**

**2 ನೇ ಕಿ.ಪ್ರ.ದ. ನ್ಯಾ ದಂ. ನಂಜನಗೂಡು**